ದಿನಾಂಕಃ 09-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ</u>- ವಾದಿ ಪರವಾಗಿಃ ಶ್ರೀ. ಎಸ್.ಎಂ. ವಕೀಲರಿಂದಃ-**

ಪ್ರತಿವಾದಿ ನನಗೆ ಬರೆದುಕೊಟ್ಟ ದಾವಾ ಆಸ್ತಿಗೆ ಸಂಬಂಧಪಟ್ಟ ಕ್ರಯದ ಕರಾರು ಪತ್ರವನ್ನು ನಿಪಿ.1 ಎಂದು, ಅದರಲ್ಲಿರುವ ಪ್ರತಿವಾದಿಯ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ, ಅವುಗಳನ್ನು ನಿಪಿ.1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು. ಆ ಕ್ರಯದ ಕರಾರು ಪತ್ರಕ್ಕೆ ಬಿ.ವಿ.ಚೌಡಯ್ಯ ಮತ್ತು ಎಂ.ಆರ್.ಜಗದೀಶ್ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿದ್ದು, ಬಿ.ವಿ.ಚೌಡಯ್ಯರವರ ಸಹಿಯನ್ನು ನಿಪಿ.1(ಸಿ) ಮತ್ತು ಎಂ.ಆರ್.ಜಗದೀಶ್ ರವರ ಸಹಿಯನ್ನು ನಿಪಿ.1(ಡಿ) ಎಂದು ಗುರುತಿಸಲಾಯಿತು. ಆ ಕ್ರಯದ ಕರಾರು ಪತ್ರವನ್ನು ನಾಗಭೂಷಣ ಎಂಬ ನೋಟರಿ ವಕೀಲರು ಬರೆದು ಸಹಿ ಮಾಡಿರುತ್ತಾರೆ. ನನ್ನ ತಂದೆ ಅಪ್ಪಾಜಯ್ಯರವರು ಪ್ರತಿವಾದಿಗೆ ದಾವಾ ಆಸ್ತಿಯನ್ನು ದಾನಪತ್ರ ಬರೆದುಕೊಟ್ಟ ಬಗ್ಗೆ ದಾನಪತ್ರದ ಆನ್ ಲೈನ್ ಪ್ರತಿಯನ್ನು ನಿಪಿ2 ಎಂದು, ನಾನು ನಮ್ಮ ವಕೀಲರ ಮೂಲಕ ಪ್ರತಿವಾದಿಗೆ ನೀಡಲಾದ ಕಾನೂನುಬದ್ಧ ನೋಟೀಸಿನ ಪ್ರತಿಯನ್ನು ನಿಪಿ.3 ಎಂದು, ಎರಡು ಅಂಚೆ ರಶೀದಿಗಳನ್ನು ನಿಪಿ.4 ಮತ್ತು 5 ಎಂದು, ಆ ನೋಟೀಸ್ ಜಾರಿಯಾಗದೇ ವಾಪಸ್ಸು ಬಂದಿದ್ದು, ಆ ಬಗ್ಗೆ ಎರಡು ಅಂಚೆ ಕವರ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.6 ಮತ್ತು 7 ಎಂದು, ಆ ನೋಟೀಸಿನ ಪ್ರತಿಗಳನ್ನು

ನಿಪಿ.6(ಎ) ಮತ್ತು 7(ಎ) ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟ ಇ.ಸಿ.ಯನ್ನು ನಿಪಿ.8 ಎಂದು, ನನಗೆ ಸಂಬಂಧಪಟ್ಟ ಕೆನರಾ ಬ್ಯಾಂಕ್ ತುಮಕೂರು ಶಾಖೆಯ ಖಾತಾ ಎಕ್ಸ್ಟ್ರಾಕ್ಟನ್ನು ನಿಪಿ.9 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ